ಓ.ಎಸ್. ನಂಬರ:-35 /2021

ಡಿ.ಡಬ್ಲೂ-:-2 : ಶಿವರಾಜ ತಂದೆ ಅಮೀನಪ್ಪ ಪೂಜಾರಿ

ದಿನಾಂಕ:- 24-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

*ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ. ಎಸ್ ಜಿ ಹೆಚ್ ವಕೀಲರಿಂದ:-*

ವಾದಿ ರುಕ್ಮಾಬಾಯಿರವರು ೧ನೇ ಪ್ರತಿವಾದಿಯ ಅಕ್ಕಳಾಗಿರುತ್ತಾರೆ. ೨ನೇ ಪ್ರತಿವಾದಿ ಗಂಗುಬಾಯಿರವರು ೧ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ೩ನೇ ಪ್ರತಿವಾದಿ ಮುಖೇಶರವರು ೧ ಮತ್ತು ೨ನೇ ಪ್ರತಿವಾದಿಯ ಮಗನಾಗಿರುತ್ತಾರೆ. ೫ನೇ ಪ್ರತಿವಾದಿ ಬಾಗುಬಾಯಿರವರು ೨ನೇ ಪ್ರತಿವಾದಿಯಾದ ಗಂಗುಬಾಯಿರವರ ತಂಗಿ ಎಂದರೆ ಸರಿ. ವಾದಿ ಯಾವ ಆಸ್ತಿಗಳ ಕುರಿತು ದಾವೆ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ವಾದಿ ಮತ್ತು ೧ನೇ ಪ್ರತಿವಾದಿಯ ಹಿರಿಯರ ಆಸ್ತಿಗಳು ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ೨೦೨೧ ರಲ್ಲಿ ಈ ದಾವೆಯನ್ನು ವಾದಿ ದಾಖಲಿಸಿದ ಕುರಿತು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

೨. ನಾನು ಸುಮಾರು ೬ ವರ್ಷಗಳ ಹಿಂದೆ ಜಮೀನು ಖರೀದಿ ಮಾಡಿರುತ್ತೇನೆ. ನ್ಯಾಯಾಲಯದಿಂದ ನನಗೆ ನೋಟಿಸು ಬಂದ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನಾನು

ನನ್ನ ಸಾಕ್ಷಿ ಪ್ರಮಾಣಪತ್ರ ಹಾಕಿರುವುದಿಲ್ಲ. ಈ ದಾವೆಯಲ್ಲಿ ಯಾವ ಯಾವ ಸರ್ವೆ ನಂಬರಗಳು ಇರುತ್ತವೆ ಮತ್ತು ಯಾರ ಯಾರ ಮೇಲೆ ದಾವೆ ಹಾಕಲಾಗಿದೆ ಎಂದು ನನಗೆ ಹೇಳಲು ಗೊತ್ತಿಲ್ಲ. ನಾನು ೨೦೨೨ ರಲ್ಲಿ ಈ ದಾವೆ ಹಾಕಿದ ನಂತರ ಜಮೀನು ಖರೀದಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಈ ದಾವೆ ಹಾಕುವ ಮೊದಲೆ ಜಮೀನು ಖರೀದಿ ಮಾಡಿರುತ್ತೇನೆ ಎನ್ನುತ್ತಾರೆ. ನಿಪಿ-೪೮ ರಲ್ಲಿ ನನ್ನ ಪೋಟೋ ಇರುತ್ತದೆ. ಸದರಿ ಪೋಟೋವನ್ನು ಗುರುತಿಸುವ ಸಲುವಾಗಿ ನಿಪಿ-೪೮ [ಎ] ಎಂದು ಗುರುತಿಸಲಾಯಿತು.

೩. ಈಗ ನನಗೆ ತೋರಿಸಿದ ನಿಪಿ-೪೮ ರಲ್ಲಿರುವ ಪೋಟೋ ಗಂಗುಬಾಯಿರವರದು ಇರುತ್ತದೆ. ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸದರಿ ಪೋಟೋವನ್ನು ಗುರುತಿಸುವ ಸಲುವಾಗಿ ನಿಪಿ-೪೮ [ಬಿ] ಎಂದು ಗುರುತಿಸಲಾಯಿತು. ೨೦೨೧-೨೨ ರವರೆಗೆ ಸರ್ವೆ ನಂಬರ ೩೫೫/೫ ರ ಜಮೀನು ಗಂಗುಬಾಯಿರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ವಾದಿ ದಾವೆ ಹಾಕಿದ ವಿಚಾರ ಗೊತ್ತಿದ್ದರೂ ಕೂಡಾ ನಾನು ದಾವಾ ಜಮೀನನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಾರಾಟಗಾರಳಾದ ೨ನೇ ಪ್ರತಿವಾದಿಗೆ ದಾವಾ ಜಮೀನುಗಳನ್ನು ಮಾರಾಟ ಮಾಡುವ ಯಾವುದೆ ಹಕ್ಕು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.